**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ** 5028/2024 ಪ್ರಾಸಾ-07
ಚಾಸಾ-18

ದಿನಾಂಕಃ 01-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ರತ್ನಕರ್ ಜಿ. ಎನ್. |
| **ತಂದೆಯ / ಗಂಡನ ಹೆಸರು** | ನಾಗರಾಜು ಟಿ. |
| **ವಯಸ್ಸು** | 29 |
| **ಉದ್ಯೋಗ** | ಸಹಾಯಕ ಇಂಜಿನಿಯರ್ , ಪಿಡಬ್ಲೂಡಿ , ಪಾವಗಡ |
| **ವಾಸಸ್ಥಳ** | ಪಾವಗಡ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

**ನಾನು 2023 ಜೂನ್ ರಿಂದ ಇಲ್ಲಿಯವರೆಗೆ ಪಾವಗಡ ಪಿಡಬ್ಲೂಡಿ ಕಚೇರಿಯಲ್ಲಿ ಸಹಾಯಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.**

ದಿ.20.05.2024 ರಂದು ಚಾಸಾ-28 ರವರಿಂದ ನಮ್ಮ ಕಚೇರಿಗೆ ದೇವರಬೆಟ್ಟ ಗ್ರಾಮದ ರತ್ನಮ್ಮ ರವರ ಮನೆಯಲ್ಲಿ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಡಲು ಮನವಿ ಬಂದಿದ್ದು, ಅದೇ ದಿನ ಸಹಾಯಕ ಕಾರ್ಯಪಾಲಕ ಇಂಜಿಯರ್ ರವರು ನನಗೆ ಸದರಿ ಕೆಲಸವನ್ನು ವಹಿಸಿಕೊಟ್ಟಿದ್ದು ಅದೇ ದಿನ ಚಾಸಾ-21 ರವರೊಂದಿಗೆ ನಾನು ದೇವರಬೆಟ್ಟ ಗ್ರಾಮದ ಈರಣ್ಣ ರವರ ಮನೆಗೆ ಕರೆದುಕೊಂಡು ಹೋಗಿದ್ದು ಸದರಿ ಮನೆಗೆ ಬೀಗ ಹಾಕಿತ್ತು. ಪಾವಗಡ ದೇವಲಕೆರೆ ಜಿಲ್ಲಾ ಮುಖ್ಯ ರಸ್ತೆಯಿಂದ ಎಡ ಭಾಗದ ಸಿಸಿ ರಸ್ತೆಯಲ್ಲಿ ಕೇಶವ ಮತ್ತು ರಂಗಯ್ಯ ರವರ ಮನೆಯ ಮಧ್ಯದಲ್ಲಿ ಈರಣ್ಣ ಮನೆ ಇದ್ದು ಸದರಿ ಮನೆಯ ಒಳಗೆ ಕೃತ್ಯ ನಡೆದಿರುತ್ತದೆ ಎಂದು ಹೇಳಿದ್ದು ಸದರಿ ಮನೆಯ ಬಗ್ಗೆ ನಾನು ನಕ್ಷೆಯನ್ನು ತಯಾರಿಸಿರುತ್ತೇನೆ.

ಸದರಿ ನಕ್ಷೆಯನ್ನು ನಮ್ಮ ಕಚೇರಿಯ ಮುಖಾಂತರ ಪಾವಗಡ ಪೊಲೀಸರಿಗೆ ಕಳುಹಿಸಿಕೊಟ್ಟಿರುತ್ತೇನೆ. ನ್ಯಾಯಾಲಯದಲ್ಲಿರುವ ಮನವಿಯನ್ನು ನೋಡಿದೇನು ಅದನ್ನು ಗುರುತಿಸುತ್ತೇನೆ. ಸದರಿ ಮನವಿಯನ್ನು ನಿಪಿ-9 ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿರುವ ಕವಚ ಪತ್ರ ನೋಡಿದೇನು ಅದನ್ನು ಗುರುತಿಸುತ್ತೇನೆ. ಸದರಿ ಕವಚ ಪತ್ರವನ್ನು ನಿಪಿ-10 ಎಂದು, ನ್ಯಾಯಾಲಯದಲ್ಲಿರುವ ನಕ್ಷೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ನಕ್ಷೆಯನ್ನು ನಿಪಿ-11 ಎಂದು, ಸಾಕ್ಷಿ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ- ಶ್ರೀ. ಪಿ.ಎನ್.ಆರ್. ವಕೀಲರಿಂದ ಆರೋಪಿ ಪರವಾಗಿಃ-</u>**

ನಾನು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ಕೊಟ್ಟ ಬಗ್ಗೆ ಸ್ಥಳದಲ್ಲಿ ಪಂಚನಾಮೆ ಮಾಡಿರುವುದಿಲ್ಲ. ನಾನು ಸ್ಥಳಕ್ಕೆ ಹೋಗುವ ಮುನ್ನ ನನಗೆ ಸದರಿ ಸ್ಥಳದ ಬಗ್ಗೆ ವೈಯಕ್ತಿಕ ಮಾಹಿತಿ ಇರಲಿಲ್ಲ. ಅಕ್ಕ ಪಕ್ಕದವರನ್ನು ವಿಚಾರಿಸಿದಾಗ ನನಗೆ ಅಕ್ಕ ಪಕ್ಕದ ಮನೆಯವರ ಹೆಸರು ಗೊತ್ತಾಗಿರುತ್ತದೆ. ಈರಣ್ಣ ರವರ ಮನೆಯ ಎತ್ತರ ಎಷ್ಟು ಇರುತ್ತದೆ ಎಂದು ನಾನು ನಕ್ಷೆಯಲ್ಲಿ ತೋರಿಸಿರುವುದಿಲ್ಲ, ಸದರಿ ಮನೆ ಆರ್.ಸಿಸಿ ಮನೆಯೋ ಅಥವಾ ಜಂತಿನ ಮನೆ, ಶೀಟ್ ಎಂದು ನನಗೆ ಗೊತ್ತಿಲ್ಲ ಏಕೆಂದರೆ ನಾನು ಒಳಗೆ ಹೋಗಿ ನೋಡಿರುವುದಿಲ್ಲ. ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಕಚೇರಿಯಲ್ಲಿ ಕೂತು ಪೊಲೀಸರು ಹೇಳಿದಂತೆ ನಕ್ಷೆ ತಯಾರು ಮಾಡಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**